# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿ.ಐ.ಎನ್:ಯು04010ಕೆಎ2002ಎಸ್‌ಜಿಸಿ030438

ಫೋನ್: 9448279014
ಇಮೇಲ್–eebescomcta@gmail.com

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ಕಾರ್ಯ ಮತ್ತು ಪಾಲನಾ ವಿಭಾಗ, ಬೆವಿಕಂ,
ಚಿತ್ರದುರ್ಗ.

ಕ್ರ.ಸಂ.: ಕಾ.ನಿ.ಇಂ.[ವಿ]/ಲೆ.ಅ./ಸ.ಲೆ.ಅ./ 16489
ಲಗತ್ತು:

ದಿನಾಂಕ: 14 MAR 2025

ಅಧೀಕ್ಷಕ ಇಂಜಿನಿಯರ್(ವಿ)
ಕಾ ಮತ್ತು ಪಾ ವೃತ್ತ
ಬೆವಿಕಂ, ದಾವಣಗೆರೆ.

ಮಾನ್ಯರೇ,

ವಿಷಯ: ಐಡಿಯಾ ಇನ್ಫಿನಿಟಿ ತಂತ್ರಾಂಶದಲ್ಲಿ ಕಂಡುಬಂದಿರುವ ನ್ಯೂನ್ಯತೆಗಳ ಬಗ್ಗೆ.

ಉಲ್ಲೇಖ: 1) ಸಕಾನಿಇಂ(ವಿ) ಬೆವಿಕಂ ಚಿತ್ರದುರ್ಗ ನಗರ ಉಪ ವಿಭಾಗ ರವರ ಪ.ಸಂ.
2) ಸಕಾನಿಇಂ(ವಿ) ಬೆವಿಕಂ ಚಿತ್ರದುರ್ಗ ಗ್ರಾ.ಉಪ ವಿಭಾಗ ರವರ ಪ.ಸಂ.6303–305/ ವ್
3) ಸಕಾನಿಇಂ(ವಿ) ಬೆವಿಕಂ ಹೊಸದುರ್ಗ ಉಪ ವಿಭಾಗ ರವರ ಪ.ಸಂ.3134/07.03.2025
4) ಸಕಾನಿಇಂ(ವಿ) ಬೆವಿಕಂ ಹೊಳಲ್ಕೆರೆ ಉಪ ವಿಭಾಗ ರವರ ಪ.ಸಂ.2742/05.03.2025
5) ಸಕಾನಿಇಂ(ವಿ) ಬೆವಿಕಂ ಶ್ರೀರಾಂಪುರ ಉಪ ವಿಭಾಗ ರವರ ಪ.ಸಂ.2511/07.03.2025

---------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆವಿಕಂ ಚಿತ್ರದುರ್ಗ ವಿಭಾಗ ವ್ಯಾಪ್ತಿಯಲ್ಲಿ ಫೆಬ್ರವರಿ–2025 ಐಡಿಯಾ ಇನ್ಫಿನಿಟಿ ತಂತ್ರಾಂಶವನ್ನು ಅಳವಡಿಸಲಾಗಿದ್ದು, ಸದರಿ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುವಾಗ ಈ ಕೆಳಕಂಡ ನ್ಯೂನ್ಯತೆಗಳು ಕಂಡು ಬಂದಿದ್ದು ಈ ಬಗ್ಗೆ ಐಡಿಯಾ ಇನ್ಫಿನಿಟಿ ತಂತ್ರಾಂಶದ ಮೇಲ್ವಿಚಾರಕರಿಗೆ ತಿಳಿಸಲಾಗಿದ್ದು ಹಾಗೂ ದೂರು ದಾಖಲಿಸಿದ್ದರೂ ಇಲ್ಲಿಯವರೆಗೂ ಸಹ ಈ ಕೆಳಕಂಡ ತಾಂತ್ರಿಕ ದೋಷಗಳನ್ನು ಸರಿಪಡಿಸಿರುವುದಿಲ್ಲ. ಇದರಿಂದಾಗಿ ದಿನನಿತ್ಯದ ಕೆಲಸ–ಕಾರ್ಯಗಳಿಗೆ ತೊಂದರೆಯಾಗುತ್ತಿದ್ದು, ಮೇಲಾಧಿಕಾರಿಗಳು ಕೇಳುವ ಮಾಹಿತಿಗಳನ್ನು ಸೂಕ್ತ ಸಮಯದಲ್ಲಿ ಸಲ್ಲಿಸಲು ಆಗದೇ ಇರುವುದರಿಂದ ಉಪ ವಿಭಾಗಗಳು ಮೇಲಾಧಿಕಾರಿಗಳ ಆಕ್ಷೇಪಣೆಗೆ ಒಳಗಾಗಬೇಕಾಗಿರುತ್ತದೆಂದು. ಉಲ್ಲೇಖಿತ ಪತ್ರಗಳಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ತಂತ್ರಾಶದಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಡುವಂತೆ ಕೋರಿರುವ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

1. ಎನ್‌ಸಾಫ್ಟ್ ತಂತ್ರಾಂಶದ 31.01.2025 ರ ಡಿ.ಸಿ.ಬಿ ಪ್ರಕಾರ ಅಂತಿಮ ಶಿಲ್ಕು ಮೊತ್ತವು ಐಡಿಯಾ ಇನ್ಫಿನಿಟಿ ತಂತ್ರಾಂಶದ 01.02.2025 ರ ಆರಂಭಿಕ ಶಿಲ್ಕು ಮೊತ್ತಕ್ಕೆ ತಾಳೆಯಾಗುತ್ತಿಲ್ಲ.
2. ಫೆಬ್ರವರಿ–2025 ರ ಡಿ.ಸಿ.ಬಿ ವಿವರಗಳು ಶಾಖಾವಾರು ಜನಿತವಾಗುತ್ತಿಲ್ಲ.
3. ಎಲ್.ಟಿ.–7 ಜಕಾತಿಯಲ್ಲಿ ಡೆಪಾಸಿಟ್ ಮೊತ್ತ (ACC) ತೋರಿಸದ ಕಾರಣ ಬಾಕಿ ಮೊತ್ತಕ್ಕೆ ಡೆಪಾಸಿಟ್ ಹೊಂದಾಣಿಕೆ ಮಾಡಿಕೊಂಡು ಶಾಶ್ವತ ನಿಲುಗಡೆಗೆ ಕೋರಿರುವ ಸ್ಥಾವರಗಳ ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಸಾಧ್ಯವಾಗಿರುವುದಿಲ್ಲ.
4. ಸರ್ಕಾರಿ ಶಾಲೆ ಮತ್ತು ಕಾಲೇಜುಗಳಿಗೆ ನೀಡಿರುವ ಉಚಿತ ವಿದ್ಯುತ್ ರಿಯಾಯಿತಿ ದಾಖಲಿಸಲು ತಂತ್ರಾಂಶದಲ್ಲಿ ಅವಕಾಶವಿರುವುದಿಲ್ಲ ಈ ಬಗ್ಗೆ ಕೋರಿ ದೂರು ದಾಖಲಿಸಿದ್ದರೂ ಸರಿಪಡಿಸಿ ಕೊಟ್ಟಿರುವುದಿಲ್ಲ.
5. ಬಿಲ್ಲಿಂಗ್ ದಕ್ಷತೆ ವರದಿಯು ವಿಭಾಗ/ ಉಪ ವಿಭಾಗ/ ಶಾಖಾವಾರು ಹಾಗೂ ಮಾಪಕ ಓದುಗವಾರು ಜನಿತವಾಗುತ್ತಿಲ್ಲ.
6. ಬೇಡಿಕೆ ಮತ್ತು ವಸೂಲಾತಿ ವರದಿಗಳು ಹಾಗೂ ಸ್ಥಾವರವಾರು, ಜಕಾತಿವಾರು ಬಾಕಿ ಮೊತ್ತದ ವಿವರಗಳು ಸರಿಯಾಗಿ ಜನಿತವಾಗುತ್ತಿರುವುದಿಲ್ಲ ಮತ್ತು ತಾಳೆಯಾಗುತ್ತಿರುವುದಿಲ್ಲ.
7. ಅವಧಿವಾರು ಎಂ.ಎನ್.ಆರ್ ಮತ್ತು ಆಯಾ ತಿಂಗಳಲ್ಲಿ ಸೇರ್ಪಡೆಯಾಗಿರುವ ಹಾಗೂ ಬದಲಾಯಿಸಿರುವ ಮಾಪಕಗಳ ವಿವರಗಳು ಜನಿತವಾಗುತ್ತಿಲ್ಲ.
8. ಎಸ್.ಆರ್.ಟಿ.ಪಿ.ವಿ ಬಿಲ್ಲಿಂಗ್ ಮಾಡಲು ಆರಂಭಿಕ ರೀಡಿಂಗ್ ಕ್ಯಾಪ್ಚರ್ ಆಗಿರುವುದಿಲ್ಲ. ಈ ಬಗ್ಗೆಯೂ ಕಂಪ್ಲೈಂಟ್ ದಾಖಲಿಸಿದ್ದರು ಸರಿ ಪಡಿಸಿಕೊಟ್ಟಿರುವುದಿಲ್ಲ.
9. ಸೋಲಾರ್ ಬಿಲ್ ತಂತ್ರಾಂಶದಲ್ಲಿ ಲಿಂಕ್ ಆಗಿರುವುದಿಲ್ಲ, ಆದ್ದರಿಂದ ಗ್ರಾಹಕರಿಗೆ ಮ್ಯಾನುಯಲ್ ಬಿಲ್ ನೀಡಲಾಗಿದ್ದು ತಂತ್ರಾಂಶದಲ್ಲಿ ನಾಟ್ ಬಿಲ್ ಆಗಿದೆ.
10. LT-1-FL ಜಕಾತಿಯ ಸ್ಥಾವರಗಳು ಐಡಿಯಾ ಇನ್ಫಿನಿಟಿ ತಂತ್ರಾಂಶದಲ್ಲಿ LT-1 ಎಂದು ಬದಲಾವಣೆಯಾಗಿರುತ್ತವೆ.
11. ಬಿಲ್ಲಿಂಗ್ ಸಂದರ್ಭದಲ್ಲಿ ಎಸ್.ಎಂ.ಬಿ.ನಲಿ ಛಾಯ ಚಿತ್ರ ಮಾಡುವಾಗ ಟೆಂಪರೇಚರ್ ಹೈ ಎಂದು ತೋರಿಸಿ ಬಿಲ್ಲು ಜನಿತವಾಗುತ್ತಿಲ್ಲ.
12. ಜನವರಿ–2025 ರ ಡಿ.ಎಲ್. ಆದ ಸ್ಥಾವರಗಳಿಗೆ ಫೆಬ್ರವರಿ–2025 ರ ಮಾಹೆಯಲ್ಲಿ ರೀಡಿಂಗ್ ನೀಡಿದಾಗ ಡಿ.ಎಲ್ ಯೂನಿಟ್ ವಿತ್‌ಡ್ರಾ ಆಗದೇ ಎಲ್ಲಾ ಯುನಿಟ್‌ಗಳಿಗೂ ಬಿಲ್ಲು ಜನಿತಗೊಂಡಿರುತ್ತದೆ.

13. ಹೊಸ ಸ್ಥಾವರಗಳಿಗೆ ತಾತ್ಕಾಲಿಕ ಸ್ಥಾವರದ ಮೀಟರ್ ಅಳವಡಿಸಿ ಗಣಾಂಕವನ್ನು ಐ.ಆರ್. ಎಂದು ಕಡತ ತೆರೆಯುವಾಗ ನೀಡಿದ್ದರೂ ಬಿಲ್ಲುಗಳು ಶೂನ್ಯದಿಂದ ಪ್ರಾರಂಭವಾಗುತ್ತಿರುವುದರಿಂದ ಬಿಲ್ಲುಗಳನ್ನು ವಿತರಿಸಲು ಸಾಧ್ಯವಾಗುತ್ತಿಲ್ಲ.
14. ಕೈಮಗ್ಗ ಬಿಲ್ಲುಗಳನ್ನು ದಿನಾಂಕ :01.01.2025 ರಿಂದ ನೀಡಿದ್ದರೂ ಸಹ ದಿನಾಂಕ :01.02.2025 ರಿಂದ ರಿಯಾಯತಿ ಬಿಲ್ಲಿನಲ್ಲಿ ಆಕರಣೆಯಾಗುತ್ತಿರುತ್ತದೆ.
15. ಉಪವಿಭಾಗವಾರು ಬಿಲ್ಲಿಂಗ್ ದಕ್ಷತೆಯಲ್ಲಿ to be billed ದಿನಾಂಕವಾರು ತಪ್ಪಾಗಿರುವ ವಿವರ ಜನಿಯಗೊಳ್ಳುತ್ತಿರುತ್ತದೆ.
16. ಆರ್.ಆರ್. ಸಂಖ್ಯೆಗಳಿಗೆ ಪಾವತಿಸಿದ ಎಸಿಸಿ ಮೊತ್ತ Customer History ಯಲ್ಲಿ ಲಭ್ಯವಿರುವುದಿಲ್ಲ.
17. Old Customer History ತಂತ್ರಾಂಶದಲ್ಲಿ ಲಭ್ಯವಿರುವುದಿಲ್ಲ
18. ಎಲ್ಲಾ ಸ್ಥಾವರಗಳ ಮಾಸ್ಟರ್ ರಿಪೋರ್ಟ್ ಲಭ್ಯವಿರುವುದಿಲ್ಲ.
19. ಡಿ.ಟಿ.ಸಿ.ವಾರು ಅರಿಯರ್ಸ್ ಬಿಲ್ಲಿಂಗ್ ವಿವರ ಲಭ್ಯವಿರುವುದಿಲ್ಲ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ವಿಭಾಗ, ಬೆವಿಕಂ
ಚಿತ್ರದುರ್ಗ

ಪ್ರತಿಯನ್ನು: ಕಛೇರಿ ಪ್ರತಿ